# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉತ್ತರ ಕನ್ನಡ , ಕಾರವಾರ

## S.C No. 09/2021

ಫಿರ್ಯಾದಿ – ಸರ್ಕಾರ – ಕುಮಟಾ ಪೋಲೀಸ್ ಠಾಣೆ

**ವಿರುದ್ಧ**

ಆರೋಪಿ – ಶ್ರೀಧರ ತಂದೆ ವೆಂಕಟ್ರಮಣ ಅಂಬಿಗ

**ದೋಷಾರೋಪಣೆ**

ಶ್ರೀ ಡಿ.ಎಸ್. ವಿಜಯಕುಮಾರ್, ಬಿ.ಎಸ್.ಸಿ. ಎಲ್.ಎಲ್.ಬಿ., ಪ್ರಧಾನ ಜಿಲ್ಲಾ ಮತ್ತು ನ್ಯಾಯಾಧೀಶರು, ಉತ್ತರ ಕನ್ನಡ , ಕಾರವಾರ ಆದ ನಾನು

ಶ್ರೀಧರ ತಂದೆ ವೆಂಕಟ್ರಮಣ ಅಂಬಿಗ
ಪ್ರಾಯಃ 30 ವರ್ಷ,
ಸಾಃ ಧಾರೇಶ್ವರ, ಬೇಲೆ, ಕುಮಟಾ ತಾಲೂಕು

ನಿಮ್ಮ ವಿರುದ್ಧ ಆಪಾದಿಸುವುದೇನೆಂದರೆಃ

ಮೊದಲನೆಯದಾಗಿ, ದಿನಾಂಕಃ 25.05.2019 ಕ್ಕೆ ಸುಮಾರು ಒಂದು ವರ್ಷ ಹಿಂದೆ ಬೆಳಿಗ್ಗೆ 5.00 ಗಂಟೆಗೆ ಕುಮಟಾ ಪೋಲೀಸ ಠಾಣೆಯ ವ್ಯಾಪ್ತಿಯಲ್ಲಿ ಬರುವ ಕುಮಟಾ ತಾಲೂಕಿನ ಧಾರೇಶ್ವರ ಬೇಲೆ ಗ್ರಾಮದಲ್ಲಿ ದೇವಗಿರಿ ಗ್ರಾಮ ಪಂಚಾಯತಿ ಮನೆ ನಂಬರ 97 ರಲ್ಲಿ ಆರೋಪಿಯಾದ ನೀವು ನೊಂದ ಫಿರ್ಯಾದಿ ಶ್ರೀಮತಿ ಬಲಿಯಮ್ಮಾ ಪಾಂಡುರಂಗ ಅಂಬಿಗ ಇವಳಿಗೆ ಮದುವೆಯಾದ ಬಗ್ಗೆ ಗೊತ್ತಿದ್ದು ಕೂಡಾ ಅವರ ಮನೆಗೆ ಹೋಗಿ ಬಂದು ಮಾಡಿ ಅವಳ ಪರಿಚಯ ಮಾಡಿಕೊಂಡು ಮನೆಯಲ್ಲಿ ಫಿರ್ಯಾದಿ ತಂದೆ ಮತ್ತು ತಮ್ಮ ಇಲ್ಲದ ವೇಳೆಯಲ್ಲಿ ಮನೆ ಒಳಗೆ ಹೋಗಿ ಫಿರ್ಯಾದಿಯನ್ನು ಹಿಡಿದುಕೊಂಡು ಮೈ ಮೇಲೆ ಮತ್ತು ಎದೆಯ ಮೇಲೆ ಕೈ ಆಡಿಸಿ, ನೀನು ತನ್ನ ಜೊತೆ ಮಲಗು ಈ ವಿಷಯ ಯಾರಿಗೂ ಹೇಳಬೇಡ ಅಂತ ಹೇಳಿದಾಗ ಫಿರ್ಯಾದಿಯು ತನಗೆ ಮದುವೆಯಾಗಿದೆ ಈ ರೀತಿ ಮಾಡಬೇಡ ಎಂದು ಹೇಳಿದರೂ ಸಹಾ ಆಕೆಯ ಇಷ್ಟಕ್ಕೆ ವಿರುದ್ಧವಾಗಿ ಬಚ್ಚಲು ಮನೆಗೆ ಕರೆದುಕೊಂಡು ಹೋಗಿ

ಬಟ್ಟೆಗಳನ್ನು ಬಿಚ್ಚಿಸಿ ನೆಲದ ಮೇಲೆ ಮಲಗಿಸಿ ಬಲತ್ಕಾರವಾಗಿ ಸಂಭೋಗ ಮಾಡಿದ್ದಲ್ಲದೇ ಅದೇ ರೀತಿ ಬಹಳಷ್ಟು ಸಾರಿ ಬಲತ್ಕಾರವಾಗಿ ಸಂಭೋಗ ಮಾಡಿ ಫಿರ್ಯಾದಿಯು 6 ತಿಂಗಳು ಗರ್ಭಿಣಿಯಾಗುವಂತೆ ಮಾಡಿ, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 376(2)(n) ರನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಮಾಡಿರುವಿರಿ .

ಎರಡನೆಯದಾಗಿ ಮೇಲೆ ಹೇಳಿದ ದಿನ , ಸ್ಥಳ ಹಾಗೂ ವೇಳೆಯಂದು ಆರೋಪಿಯಾದ ನೀವು ನೊಂದ ಫಿರ್ಯಾದಿ ಶ್ರೀಮತಿ ಬಲಿಯಮ್ಮಾ ಪಾಂಡುರಂಗ ಅಂಬಿಗ ಇವರು ತನಗೆ ಮದುವೆಯಾಗಿದೆ ಈ ರೀತಿ ಮಾಡಬೇಡ ಎಂದು ಹೇಳಿದ್ದಕ್ಕೆ ಆರೋಪಿಯಾದ ನೀವು ಫಿರ್ಯಾದಿಗೆ ನೀನು ತನ್ನ ಜೊತೆ ಮಲಗದಿದ್ದರೆ ನಿನ್ನನ್ನು ಮತ್ತು ನಿಮ್ಮ ಮನೆಯ ಜನರನ್ನು ಸಾಯಿಸುತ್ತೇನೆ ಅಂತ ಹೆದರಿಸಿ ಆಕೆಗೆ ಜೀವ ಬೆದರಿಕೆ ಹಾಕಿ, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ರ ರನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಮಾಡಿರುವಿರಿ .

ಸದರಿ ಆರೋಪದ ಮೇಲೆ ನೀವು ಈ ನ್ಯಾಯಾಲಯದಿಂದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ..

ದಿನಾಂಕಃ 07 ನೇ ಜೂನ್ 2022.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ .

## ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉತ್ತರ ಕನ್ನಡ , ಕಾರವಾರ

## **S.C No.** 09/2021

ಫಿರ್ಯಾದಿ – ಸರ್ಕಾರ – ಕುಮಟಾ ಪೋಲೀಸ್ ಠಾಣೆ

**ವಿರುದ್ಧ**

ಆರೋಪಿ – ಶ್ರೀಧರ ತಂದೆ ವೆಂಕಟ್ರಮಣ ಅಂಬಿಗ

## ದೋಷಾರೋಪಣೆ

ಆರೋಪಿಯ ಹೆಸರು – ಶ್ರೀಧರ ಅಂಬಿಗ

ತಂದೆಯ ಹೆಸರು – ವೆಂಕಟ್ರಮಣ ಅಂಬಿಗ

ವಯಸ್ಸು – 30 ವರ್ಷ

ಉದ್ಯೋಗ – ಮೀನುಗಾರಿಕೆ

ವಾಸ – ಧಾರೇಶ್ವರ, ಬೇಲೆ, ಕುಮಟಾ ತಾಲೂಕು.

## ಆರೋಪಿಯ ಹೇಳಿಕೆ

ಪ್ರಶ್ನೆಃ ನಿಮ್ಮ ಮೇಲೆ ಮಾಡಿದ ದೋಷಾರೋಪಣೆಯ ವಿವರಗಳು ನಿಮಗೆ ತಿಳಿಯಿತೆ?
ಉತ್ತರಃ ಅರ್ಥವಾಗಿದೆ.

ಪ್ರಶ್ನೆಃ ನೀವು ತಪ್ಪ ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆ ಆಗಬೇಕೆಂದು ಬಯಸುತ್ತಿರಾ?
ಉತ್ತರಃ ತಪ್ಪ ಮಾಡಿಲ್ಲ ವಿಚಾರಣೆಯಾಗಬೇಕು .

ಮೇಲೆ ಹೇಳಿದ ದೋಷಾರೋಪಣೆಗಳನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು..

ದಿನಾಂಕಃ 07 ನೇ ಜೂನ್, 2022.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ .